**C.C.No. 1266/2025**
**DW:01**

**ಸಾಕ್ಷಿಯನ್ನು ದಿಃ *27/06/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : ಶ್ರೀ ಎಸವಿಬಿ ಫಿರ್ಯಾದಿದಾರರ ಪರ ವಕೀಲರಿಂದ.**

ನಾನು ವೃತ್ತಿಯಿಂದ ಸರಕಾರ ಪ್ರಾಥಮಿಕ ಶಾಲೆ ಶಿಕ್ಷಕ. ಕಳೆದ 28 ವರ್ಷಗಳಿಂದ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಕೊಕ್ಕರೆವಾಡ ಗ್ರಾಮದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ನನ್ನ ಸೇವಾವಧಿಯಲ್ಲಿ ಶಿಗ್ಗಾಂವ ತಾಲೂಕಿನ ಬಿಸನಳ್ಳಿ, ಧಾರವಾಡ ತಾಲೂಕಿನ ಹೆಬ್ಬಳ್ಳಿ, ಧಾರವಾಡ ಬಿಆರಸಿ ಕಚೇರಿಯಲ್ಲಿ, ಉಪ್ಪಿನಬೇಟಗೇರಿಯಲ್ಲಿ, ಧಾರವಾಡ ಶಹರದ ಬಿಆರಸಿಯಲ್ಲಿ ಕೆಲಸ ಮಾಡಿದ್ದೇನೆ. ನಾನು ಉಪ್ಪಿನಬೇಟಗೇರಿಯಲ್ಲಿ ಸೇವೆ ಸಲ್ಲಿಸಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಾನು 2019 ನೇ ಇಸ್ವಿಯಲ್ಲಿ ಉಪ್ಪಿನಬೇಟಗೇರಿ ಗ್ರಾಮದಲ್ಲಿ ಸೇವೆ ಸಲ್ಲಿಸುತ್ತಿದ್ದೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಎಂಥಹ ಸ್ಥಿತಿವಂತ ವ್ಯಕ್ತಿಯಿದ್ದರೂ ಕಷ್ಟ ಬಂದಾಗ ಸಾಲ ಮಾಡಬೇಕಾಗುತ್ತದೆ ಎಂದರೆ ಸರಿ. ನಾನು ಧಾರವಾಡದಲ್ಲಿ ಮೊದಲು ನೆಲಮಹಡಿಯ ಮನೆ ಕಟ್ಟಿ, ಅದರ ಮಹಡಿ ಮನೆಯನ್ನು 2022-23 ರಲ್ಲಿ ಮುಗಿಸಿದ್ದೇನೆ. ಮಹಡಿ ಮನೆ ಕಟ್ಟಲು 20-30 ಲಕ್ಷ ರೂಪಾಯಿ ಖರ್ಚಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು 20 ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಉತ್ತರಿಸುತ್ತಾರೆ. ರೂ.20 ಲಕ್ಷ ರೂಪಾಯಿ ಹಣವನ್ನು ನಮ್ಮ ಶಿಕ್ಷಕರ ಸೊಸೈಟಿಯಿಂದ ಹಾಗೂ ಕೈಗಡ ಸಾಲ ಪಡೆದು ಮನೆ ಕಟ್ಟಿರುತ್ತೇನೆ. ನಾನು ಶಿಕ್ಷಕರ ಸೊಸೈಟಿಯಿಂದ ಸಾಲ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

ಫಿರ್ಯಾದಿದಾರರು 2019 ರಲ್ಲಿ ಉಪ್ಪಿನಬೇಟಗೇರಿಯಲ್ಲಿ ಮೊಬೈಲ ಪೋನ ಅಂಗಡಿ ನಡೆಸುತ್ತಿದ್ದು, ಅಲ್ಲಿಂದ ನನಗೆ ಅವರು ಪರಿಚಯವಾಗಿದ್ದರು ಎಂದರೆ ಸರಿಯಲ್ಲ. ಸೊಸೈಟಿಯಿಂದ ಹಾಗೂ ಕೈಗಡವಾಗಿ ಸಾಲ ಪಡೆದ ರಕಂಗಳು ನೆನಪಿಲ್ಲ.

ಸರಕಾರಿ ನೌಕರರು ಯಾವುದೇ ಒಂದು ಆಸ್ತಿ ಖರೀದಿಸುವಾಗ ಅಥವಾ ಮನೆ ಕಟ್ಟುವಾಗ ನಿಯಮಾನುಸಾರ ಪರವಾನಿಗೆ ಪಡೆಯಬೇಕು ಎಂದರೆ ಸರಿ. ಆದರೆ ನಾನು ಪರವಾನಿಗೆ/ಅನುಮತಿ ಪಡೆದಿಲ್ಲ. ದಿಃ20-04-2024 ರಂದು ನನಗೆ ಪರಿಚಯವಿರುವ ಫಿರ್ಯಾದಿದಾರರಿಂದ ರೂ.4 ಲಕ್ಷ ರೂಪಾಯಿ ಹಣ ಪಡೆದಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಯಿಂದ ಪಡೆದುಕೊಂಡ ಹಣವನ್ನು ಮೂರು ತಿಂಗಳಲ್ಲಿ ತಿರುವಳಿ ಮಾಡುವುದಾಗಿ ಭರವಸೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಫಿರ್ಯಾದಿಗೆ ತೊಂದರೆ ಉಂಟಾದ ಕಾರಣ ನನ್ನನು ಸಂಪರ್ಕಿಸಿ ತಾನು ಕೊಟ್ಟ ಹಣವನ್ನು ಹಿಂದುರಿಗಿಸುವಂತೆ ಕೇಳಿದರು ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ದಿಃ28-08-2024 ರಂದು ಫಿರ್ಯಾದಿಗೆ ಒಂದು ಚೆಕ್ಕ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ಪ್ರಕಾರ ಚೆಕ್ಕನ್ನು ಬ್ಯಾಂಕಗೆ ಹಾಜರುಪಡಿಸಿದಾಗ ಅದು ನಗದಾಗದೇ ನನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ಅಮಾನ್ಯಗೊಂಡಿತು ಎಂದರೆ ಸರಿ. ಚೆಕ್ಕ ಅಮಾನ್ಯಗೊಂಡ ನಂತರ ಫಿರ್ಯಾದಿ ದೂರವಾಣಿಯಲ್ಲಿ ಸಂಪರ್ಕಿಸಿ ಚೆಕ್ಕ ಅಮಾನ್ಯಗೊಂಡ ಮಾಹಿತಿ ನನಗೆ ನೀಡಿದರು ಎಂದರೆ ಸರಿಯಲ್ಲ.

ಫಿರ್ಯಾದಿದಾರರು ದಿ:13-09-2024 ರಂದು ನನಗೆ ನೋಟೀಸು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ನೋಟೀಸು ದಿ:17-09-2024 ರಂದು ನನಗೆ ಮುಟ್ಟಿದೆ ಎಂದರೆ ಸರಿಯಲ್ಲ. ನಿ.ಪಿ.5 ರಲ್ಲಿ ಕಂಡುಬರುವ ವಿಳಾಸ ನಮ್ಮ ವಿಳಾಸವಾಗಿರುವುದಿಲ್ಲ. ನಿ.ಪಿ.5 ರಲ್ಲಿ ಕಂಡುಬರುವ ಸಹಿ ನನ್ನದಲ್ಲ. ಫಿರ್ಯಾದಿ ಕೊಟ್ಟ ನೋಟೀಸು ನನಗೆ ಜಾರಿಯಾಗಿದ್ದರೂ ಸಹ ಅದು ಜಾರಿಯಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಯಲ್ಲಿ ಕಂಡುಬರುವ ವಿಳಾಸ ನನ್ನ ಮನೆಯ ವಿಳಾಸ ಆಗಿರುತ್ತದೆ.

ನಾನು ಹಾಜರುಪಡಿಸಿರುವ ನಿ.ಡಿ.3 ರಲ್ಲಿ ಕಂಡುಬರುವ ವ್ಯವಹಾರವು ಫಿರ್ಯಾದಿಗೆ ಸಂಬಂಧಿಸಿದ್ದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಶಿವಾನಂದ ಬೇಟಗೇರಿ ಇವರಿಗೆ ಸಂಬಂಧಿಸಿದ್ದು ಎಂದು ಸ್ವತಃ ಹೇಳುತ್ತಾರೆ.

ನಿ.ಪಿ.1 ಎಂದು ಗುರುತಿಸಿರುವ ಚೆಕ್ಕನ್ನು ಶಿವಾನಂದ ಬೇಟಗೇರಿ ಇವರಿಗೆ ಕೊಟ್ಟಿದ್ದೇನೆ ಎಂದು ತೋರಿಸುವ ಯಾವುದೇ ದಾಖಲೆ ಇಲ್ಲ. ನಾನು ಮನೆ ಕಟ್ಟುವ ಸಮಯದಲ್ಲಿ ಹಣದ ಅವಶ್ಯಕತೆ ಉಂಟಾಗಿ ಫಿರ್ಯಾದಿ ಕಡೆಯಿಂದ 4 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಫಿರ್ಯಾದಿಗೆ ಕೊಡಬೇಕಾಗುತತದೆ ಎನ್ನುವ ಕಾರಣಕ್ಕಾಗಿ ನಾನು ಶಿವಾನಂದ ಬೇಟಗೇರಿ ಎನ್ನುವವರ ಜೊತೆಗೆ ಮಿಲಾಪಿಯಾಗಿ ನಿ.ಪಿ.1 ನ್ನು ಶಿವಾನಂದ ಬೇಟಗೇರಿ ಇವರಿಗೆ ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.